# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 683

ವಿಧಾನ ಪರಿಷತ್ ಸದಸ್ಯರ ಹೆಸರು : ಶ್ರೀ ಅರವಿಂದ ಕುಮಾರ್ ಅರಳಿ (ವಿಧಾನ ಸಭೆಯಿಂದ ಚುನಾಯಿತರಾದವರು)

ಉತ್ತರಿಸುವವರು : ಮಾನ್ಯ ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ ಸಾರ್ವಜನಿಕ ವಲಯ ಉದ್ಯಮಗಳ ಸಚಿವರು

ಉತ್ತರಿಸಬೇಕಾದ ದಿನಾಂಕ : 22.02.2022

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ಬೀದರ್ ಜಿಲ್ಲೆಯ ಸಣ್ಣ ಕೈಗಾರಿಕಾ ಇಲಾಖೆಯ ಯೋಜನೆಗಳಿಗೆ 2021-22ನೇ 473.57 ಕೋಟಿ ಅನುದಾನ ಬಿಡುಗಡೆಯಾಗಿದ್ದು, ಅದರಲ್ಲಿ 76.64 ಕೋಟಿ ಖರ್ಚು ಆಗಿರುವುದಾಗಿ ಸದನದಲ್ಲಿ ಭರವಸೆ ನೀಡಿದ್ದು, ಬಾಕಿ ಉಳಿದ 396.93 ಕೋಟಿ ಅನುದಾನ ಬಿಡುಗಡೆ ಮಾಡುವುದು ಯಾವಾಗ;</td><td>2021-22ನೇ ಸಾಲಿನಲ್ಲಿ ಎಂಎಸ್‌ಎಂಇ ವಲಯಕ್ಕೆ ಒಟ್ಟು 474.84 ಕೋಟಿ ಅನುದಾನ ಹಂಚಿಕೆಯಾಗಿದ್ದು ಇದರಲ್ಲಿ ಆರ್ಥಿಕ ಇಲಾಖೆಯು ಜನವರಿ 2022 ರ ಅಂತ್ಯದವರೆಗೆ ರೂ.272.56 ಕೋಟಿಗಳನ್ನು ಬಿಡುಗಡೆ ಮಾಡಿದ್ದು ಅದರಲ್ಲಿ ರೂ.180.98 ಕೋಟಿಗಳನ್ನು ವೆಚ್ಚ ಮಾಡಲಾಗಿದೆ. ಉಳಿದ ರೂ.202.28 ಕೋಟಿ ಅನುದಾನವನ್ನು ಆರ್ಥಿಕ ಇಲಾಖೆಯು ಬಿಡುಗಡೆ ಮಾಡಬೇಕಾಗಿದ್ದು, ಬಿಡುಗಡೆಯಾದ ನಂತರ ವೆಚ್ಚ ಮಾಡಲಾಗುವುದು.<br><br>ಬೀದರ್ ಜಿಲ್ಲೆಗೆ ಸಂಬಂಧಿಸಿದಂತೆ ಅನುದಾನವನ್ನು ಯೋಜನೆಗಳ ಬೇಡಿಕೆ ಮತ್ತು ರಾಜ್ಯ ಮಟ್ಟದಲ್ಲಿ ಜೇಷ್ಠತೆ ಆಧರಿಸಿ ಬಿಡುಗಡೆ ಮಾಡಲಾಗುತ್ತಿದೆ.</td></tr>
<tr><td>(ಆ)</td><td>ಅನುದಾನ ಬಾಕಿ ಇರಲು ಕಾರಣಗಳೇನು; ಜನರಿಗೆ ಯೋಜನೆಗಳ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮ ನಡೆಸಲಾಗಿದೆಯೇ; ನಡೆಸಿದ್ದಲ್ಲಿ ವಿವರ ನೀಡುವುದು;</td><td>ಆರ್ಥಿಕ ಇಲಾಖೆಯು ಅನುದಾನವನ್ನು 4 ತ್ರೈಮಾಸಿಕ ಕಂತುಗಳಲ್ಲಿ ಬಿಡುಗಡೆ ಮಾಡುತ್ತದೆ. ಅದರಂತೆ ಈಗಾಗಲೇ 2 ಕಂತು ಬಿಡುಗಡೆ ಮಾಡಿದ್ದು ಉಳಿದ 2 ಕಂತುಗಳನ್ನು ಬಿಡುಗಡೆ ಮಾಡಬೇಕಾಗಿರುತ್ತದೆ.<br><br>ಜಿಲ್ಲಾ ಕೈಗಾರಿಕಾ ಕೇಂದ್ರ, ಬೀದರ್ ಕಛೇರಿಯು ಉದ್ಯಮಶೀಲರಿಗೆ ಯೋಜನೆಗಳ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಈ ಕೆಳಗಿನಂತೆ ನಡೆಸಿರುತ್ತದೆ.
<table>
<tr><th>ಕ್ರ. ಸಂ.</th><th>ಸ್ಥಳ</th><th>ಹಾಜರಾದ ದಿನಾಂಕ</th><th>ಉದ್ದಿಮೆದಾರರ ಸಂಖ್ಯೆ</th></tr>
<tr><td>1</td><td>ಜಿಲ್ಲಾ ತರಬೇತಿ ಕೇಂದ್ರ, ಬೀದರ್</td><td>14/09/2021</td><td>70</td></tr>
<tr><td>2</td><td>ಸೌಹಾರ್ದ ತರಬೇತಿ ಸಂಸ್ಥೆ, ನೌಬಾದ್, ಬೀದರ್</td><td>25/01/2022</td><td>75</td></tr>
</table></td></tr>
<tr><td>(ಇ)</td><td>ವಿಶೇಷ ಘಟಕ ಯೋಜನೆ-ನಿವೇಶನ ಸಹಾಯಧನ ಯೋಜನೆಯ ಪ್ರಗತಿ ಹಾಗೂ ಫಲಾನುಭವಿಗಳ ವಿವರ ನೀಡುವುದು; (ತಾಲ್ಲೂಕುವಾರು ಮಾಹಿತಿ ನೀಡುವುದು)</td><td>ದಿನಾಂಕ 1/4/2021 ರಿಂದ 31/12/2021 ರ ವರೆಗೆ ಒಟ್ಟು 245 ಫಲಾನುಭವಿಗಳಿಗೆ ರೂ.14512.79 ಲಕ್ಷಗಳನ್ನು ವಿಶೇಷ ಘಟಕ ಯೋಜನೆಯಡಿ ನಿವೇಶನ ಸಹಾಯಧನವನ್ನು ಬಿಡುಗಡೆ ಮಾಡಲಾಗಿದೆ. ಹಾಗೂ ಕರ್ನಾಟಕ ಕೈಗಾರಿಕಾ ಅಭಿವೃದಿ ಮಂಡಳಿಯವರು ಸಲ್ಲಿಸಿರುವ ಮಾಹಿತಿಯಂತೆ ಮೇಲಿನ</td></tr>
</table>

| | | |
|---|---|---|
| | | ಅವಧಿಯಲ್ಲಿ ಬೀದರ್ ಜಿಲ್ಲೆಯಲ್ಲಿ ಸದರಿ ಯೋಜನೆಯಡಿ ಯಾವ ಉದ್ಯಮಿದಾರರು ನಿವೇಶನ ಸಹಾಯಧನವನ್ನು ಪಡೆದಿರುವುದಿಲ್ಲ. |
| (ಈ) | ಪ್ರೋತ್ಸಾಹ ಮತ್ತು ರಿಯಾಯಿತಿ ಯೋಜನೆಗೆ ಬಂದಿರುವ ಅನುದಾನ ಎಷ್ಟು; ಬಾಕಿ ಇರುವ ಅನುದಾನ ಎಷ್ಟು? | 2021-22 ನೇ ಸಾಲಿನಲ್ಲಿ ಪ್ರೋತ್ಸಾಹ ಮತ್ತು ರಿಯಾಯಿತಿ ಯೋಜನೆಗೆ ರಾಜ್ಯದ ಎಲ್ಲಾ ಜಿಲ್ಲೆಗಳಿಗೆ ರೂ.24,175.00 ಲಕ್ಷ ಅನುದಾನ ಹಂಚಿಕೆಯಾಗಿದ್ದು ಇಲ್ಲಿಯವರೆಗೆ ರೂ. 11,937.50 ಲಕ್ಷ ಅನುದಾನ ಬಿಡುಗಡೆ ಆಗಿದ್ದು ಇನ್ನು ರೂ. 12,237.50 ಲಕ್ಷ ಬಿಡುಗಡೆ ಆಗಬೇಕಾಗಿರುತ್ತದೆ.<br><br>ಬೀದರ್ ಜಿಲ್ಲೆಗೆ ಸಂಬಂಧಿಸಿದಂತೆ 31/3/2021 ರ ಅಂತ್ಯಕ್ಕೆ ಕೈ ಕೈಗಾರಿಕಾ ನೀತಿ ಮತ್ತು ಕೃಷಿ ನೀತಿಗಳಡಿಯಲ್ಲಿ ಒಟ್ಟು 66 ಘಟಕಗಳಿಗೆ ರೂ.16.08 ಕೋಟಿ ಬಾಕಿ ಬಿಡುಗಡೆ ಮಾಡಬೇಕಾಗಿದ್ದು ಇದರಲ್ಲಿ ಜನವರಿ 2022 ರ ಅಂತ್ಯದವರೆಗೆ 23 ಘಟಕಗಳಿಗೆ ರೂ.4.73 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ. ಉಳಿದ 43 ಘಟಕಗಳಿಗೆ ರೂ.11.35 ಕೋಟಿ ಮೊತ್ತವನ್ನು ಅನುದಾನ ಬಂದ ನಂತರ ಜೇಷ್ಠತೆಯ ಆಧಾರದ ಮೇಲೆ ಬಿಡುಗಡೆ ಮಾಡಲಾಗುವುದು. ನೀತಿವಾರು ವಿವರಗಳನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ. |

ಸಿಐ 33 ಎಸ್ಎಸ್ಐ 2022

(ಎನ್.ನಾಗರಾಜು (ಎಂ.ಟಿ.ಬಿ))
ಪೌರಾಡಳಿತ, ಸಣ್ಣ ಕೈಗಾರಿಕೆಗಳು ಮತ್ತು
ಸಾರ್ವಜನಿಕ ವಲಯ ಉದ್ಯಮಗಳ ಸಚಿವರು



Generated from eOffice by NAGARAJ MTB, C&I-MIN(NMTB), MINISTER, C&I SEC on 21/02/2022 11:22 AM

**ಶ್ರೀ ಅರವಿಂದ ಕುಮಾರ್ ಅರಳಿ, ವಿಧಾನ ಪರಿಷತ್ ಸದಸ್ಯರು ಇವರ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ 683 ಕ್ಕೆ ಅನುಬಂಧ-1**

**DETAILS OF INCENTIVES AND CONCESSIONS OF BIDAR DISTRICT**

| POLICY | PERIOD | OUTSTANDING BALANCE | | RELEASED | | TO BE RELEASED | |
|---|---|---|---|---|---|---|---|
| | | # | Amt | # | Amt | # | Amt |
| INDUSTRIAL POLICY | 2018-19 | - | - | | | - | - |
| | 2019-20 | 18 | 2,36,11,811 | 18 | 2,36,11,811 | - | - |
| | 2020-21 | 41 | 10,46,37,121 | | | 41 | 10,46,37,121 |
| | **TOTAL** | **59** | **12,82,48,932** | **18** | **2,36,11,811** | **41** | **10,46,37,121** |
| AGRI POLICY | 2018-19 | 2 | 89,14,300 | 1 | 65,00,000 | 1 | 24,14,300 |
| | 2019-20 | 4 | 1,71,87,181 | 4 | 1,71,87,181 | - | - |
| | 2020-21 | 1 | 65,00,000 | | | 1 | 65,00,000 |
| | **TOTAL** | **7** | **3,26,01,481** | **5** | **2,36,87,181** | **2** | **89,14,300** |
| TOTAL | 2018-19 | 2 | 89,14,300 | 1 | 65,00,000 | 1 | 24,14,300 |
| | 2019-20 | 22 | 4,07,98,992 | 22 | 4,07,98,992 | - | - |
| | 2020-21 | 42 | 11,11,37,121 | - | - | 42 | 11,11,37,121 |
| | **TOTAL** | **66** | **16,08,50,413** | **23** | **4,72,98,992** | **43** | **11,35,51,421** |